# ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ.

## CC 244/2017

| | |
|---|---|
| ಫಿರ್ಯಾದುದಾರರು | : ಶ್ರೀ. ಕೃಷ್ಣ ಉ ಕೃಷ್ಣಸ್ವಾಮಿ |
| ತಂದೆ/ಗಂಡನ ಹೆಸರು | : ಸಂಜೀವೇಗೌಡ |
| ವಯಸ್ಸು | : 34 ವರ್ಷ |
| ವಾಸ | : ದೇವರಹೊಸಹಳ್ಳಿ ಗ್ರಾಮ,<br>ಕಸಬಾ ಹೋಬಳಿ,<br>ರಾಂಪುರ ಅಂಚೆ,<br>ಚನ್ನಪಟ್ಟಣ ತಾಲ್ಲೂಕು,<br>ರಾಮನಗರ ಜಿಲ್ಲೆ. |

- ವಿರುದ್ಧ-

| | |
|---|---|
| ಆರೋಪಿತನ ಹೆಸರು | : ಶ್ರೀಮತಿ. ಚಂದ್ರಕಲಾ |
| ತಂದೆ/ಗಂಡನ ಹೆಸರು | : ಕೋಂ ವೆಂಕಟೇಶ್ |
| ವಯಸ್ಸು | : 35 ವರ್ಷ |
| ವಾಸ | : ತಿಪ್ಪೂರು ಗ್ರಾಮ,<br>ನಿಢಟಘಟ್ಟ ಅಂಚೆ,<br>ಆತಗೂರು ಹೋಬಳಿ,<br>ಮದ್ದೂರು ತಾಲ್ಲೂಕು,<br>ಮಂಡ್ಯ ಜಿಲ್ಲೆ. |

## ದಂಡ ಪ್ರಕ್ರಿಯಾ ಸಂಹಿತೆ 313 ರ ಅಡಿಯಲ್ಲಿ ಆರೋಪಿತನ ಹೇಳಿಕೆ

1. ನೀವು ಫಿರ್ಯಾದುದಾರ ಪರ ಸಾಕ್ಷ್ಯ ನುಡಿದಿರುವುದನ್ನು ಕೇಳಿರುವಿರಾ?

ಉತ್ತರ : ಕೇಳಿದ್ದೇನೆ.

2. ಫಿರ್ಯಾದುದಾರರಾದ ಶ್ರೀ. ಕೃಷ್ಣ ಉ ಕೃಷ್ಣಸ್ವಾಮಿ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಫಿರ್ಯಾದುದಾರರಿಂದ ನಿಮ್ಮ ಗೃಹಕೃತ್ಯದ ಖರ್ಚಿಗಾಗಿ ಹಾಗೂ ಕೈ ಸಾಲವನ್ನು ತೀರಿಸುವ ಸಲುವಾಗಿ ಜನವರಿ ತಿಂಗಳ ಕೊನೆಯ ವಾರ 2016 ರಂದು ರೂ.3,00,000/-ಗಳನ್ನು ಸಾಲವಾಗಿ ಪಡೆದುಕೊಂಡಿರುತ್ತೀರಿ. ನಂತರ ನೀವು 6 ತಿಂಗಳೊಳಗೆ ಮರುಪಾವತಿ ಮಾಡುತ್ತೇನೆಂದು ಹೇಳಿರುತ್ತೀರಿ ಎಂದು ನುಡಿದಿರುತ್ತಾರೆ. ಏನು ಹೇಳುತ್ತೀರಿ?

ಉತ್ತರ : ಸುಳ್ಳು.

3. ಫಿರ್ಯಾದುದಾರರಾದ ಶ್ರೀ. ಕೃಷ್ಣ ಉ ಕೃಷ್ಣಸ್ವಾಮಿ ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಹಣವನ್ನು ವಾಪಸ್ ಕೇಳಿದಾಗ ಮದ್ದೂರು ಶಾಖೆಯ ಕಾರ್ಪೋರೇಷನ್ ಬ್ಯಾಂಕ್‌ನ ದಿಃ 24-10-2016 ರ ರೂ.3,00,000/- ಸಂಖ್ಯೆಃ 283194 ಚೆಕ್ ನ್ನು ನೀಡಿರುತ್ತೀರಿ ಎಂದು ನುಡಿದಿರುತ್ತಾರೆ. ಏನು ಹೇಳುತ್ತೀರಿ?

ಉತ್ತರ ಃ ಚೆಕ್ ಕೊಟ್ಟಿದ್ದು ನಿಜ. ಸಹಿ ನನ್ನದಲ್ಲ.

4. ಫಿರ್ಯಾದುದಾರರಾದ ಶ್ರೀ. ಕೃಷ್ಣ ಉ ಕೃಷ್ಣಸ್ವಾಮಿ ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಚೆಕ್ ನ್ನು ನಗದೀಕರಣಕ್ಕಾಗಿ ಚನ್ನಪಟ್ಟಣ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕ್‌ಗೆ ದಿಃ 24.10.2016 ರಂದು ಹಾಗೂ ಮತ್ತೊಮ್ಮೆ ದಿಃ 14.11.2016 ರಂದು ಸಲ್ಲಿಸಿದಾಗ ಖಾತೆದಾರರನ್ನು ಸಂಪರ್ಕಿಸಿ ಮತ್ತು ಚೆಕ್ ನ್ನು ಮತ್ತೊಮ್ಮೆ ಹಾಜರುಪಡಿಸಿ ಎಂಬ ಷರಾದೊಂದಿಗೆ ದಿಃ17-11-2016 ರಂದು ಚೆಕ್ ನ್ನು ಅಮಾನ್ಯಗೊಳಿಸಿರುತ್ತಾರೆ. ನಂತರ ವಕೀಲರ ತಿಳುವಳಿಕೆ ಪತ್ರವು ನಿಮಗೆ ದಿಃ05-12-2016 ರಂದು ಜಾರಿಯಾದಾಗ್ಯೂ ಸಹ ನೀವು ಹಣ ಪಾವತಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು.

5. ನಿಮ್ಮ ಪರವಾಗಿ ಬೇರೆ ಏನಾದರೂ ಹೇಳುವುದು ಇದೆಯೋ?

ಉತ್ತರ ಃ ಇಲ್ಲ.

6. ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಇದೆಯೇ?

ಉತ್ತರ ಃ ಇಲ್ಲ.

(ಮೇಲಿನ ಆರೋಪಿತನ ಹೇಳಿಕೆಯನ್ನು ಓದಿ ಹೇಳಿ, ಆತನು ನೀಡಿದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು. ಅದು ನಿಜ ಮತ್ತು ಸರಿಯಾಗಿದೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

ದಿನಾಂಕಃ 08-02-2019

**ಅಪರ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ. ಚನ್ನಪಟ್ಟಣ.**